# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **909** |
| ಸದಸ್ಯರ ಹೆಸರು | ಶ್ರೀ.ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ |
| ಉತ್ತರಿಸುವವರು | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13-03-2020 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಾರವಾರ ಜಿಲ್ಲೆಯಲ್ಲಿ ಅಂಗನವಾಡಿಗಳಿಗೆ ಪೂರೈಸುತ್ತಿರುವ ಆಹಾರ ತೀರಾ ಕಳಪೆ ಮಟ್ಟದ್ದಾಗಿರುವುದಲ್ಲದೆ, ನಿಗಧಿತ ಸಮಯದಲ್ಲಿ ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ತಾಲ್ಲೂಕುವಾರು/ಜಿಲ್ಲಾವಾರು ವಿವರ ನೀಡುವುದು) | ಉತ್ತರ ಕನ್ನಡ ಜಿಲ್ಲೆಯಲ್ಲಿ (ಕಾರವಾರ) ಅಂಗನವಾಡಿಗಳಿಗೆ ಪೂರೈಸುತ್ತಿರುವ ಆಹಾರ ತೀರಾ ಕಳಪೆ ಮಟ್ಟದ್ದಾಗಿರುವುದು ಮತ್ತು ನಿಗದಿತ ಸಮಯದಲ್ಲಿ ಪೂರೈಕೆಯಾಗದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ. | ಆಹಾರ ಕಳಪೆ ಮಟ್ಟದ್ದಾಗಿರಲು ಮತ್ತು ನಿಗಧಿತ ಸಮಯದಲ್ಲಿ ಪೂರೈಸದಿರಲು ಕಾರಣಗಳೇನು: (ಮಾಹಿತಿ ನೀಡುವುದು) | ಉತ್ತರ ಕನ್ನಡ ಜಿಲ್ಲೆಯ (ಕಾರವಾರ) ಅಂಗನವಾಡಿ ಕೇಂದ್ರಗಳಿಗೆ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ನಿಗದಿತ ಸಮಯದಲ್ಲಿ ಸರಬರಾಜು ಮಾಡಲಾಗುತ್ತಿದೆ. |
| ಇ. | ಹಾಗಿದ್ದಲ್ಲಿ, ಜಿಲ್ಲೆಯಲ್ಲಿರುವ ಅಂಗನವಾಡಿಗಳಿಗೆ ಆಹಾರವನ್ನು ಪೂರೈಸುತ್ತಿರುವ ಸಂಸ್ಥೆಗಳು ಅಥವಾ ಗುತ್ತಿಗೆದಾರರ ವಿವರಗಳನ್ನು ತಾಲ್ಲೂಕುವಾರು ನೀಡುವುದು) | ಇಲಾಖಾ ವತಿಯಿಂದ ಸ್ಥಾಪಿಸಲಾಗಿರುವ ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳು (ಎಂ.ಎಸ್.ಪಿ.ಟಿ.ಸಿ) ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಸರಬರಾಜು ಮಾಡುತ್ತಿವೆ.<br><br>ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಈ | ಆಹಾರವನ್ನು ಪೂರೈಸುತ್ತಿರುವ ಸಂಸ್ಥೆಗಳು ಅಥವಾ ಗುತ್ತಿಗೆದಾರರು ಆಹಾರ ಖರೀದಿಸುತ್ತಿರುವ ಆಹಾರ ಸಾಮಗ್ರಿಗಳ ಬೆಲೆಗೂ ಹಾಗೂ ಅಂದಿನ ಎ.ಪಿ.ಎಮ್.ಸಿ ಮಾರುಕಟ್ಟೆ ಬೆಲೆಗೂ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುವ ಪೂರಕ ಪೌಷ್ಠಿಕ ಆಹಾರದ ಬೆಲೆಗಳನ್ನು ನಿಗದಿಪಡಿಸುತ್ತಿದೆ. ಈ ರೀತಿ ಬೆಲೆ ನಿಗದಿಪಡಿಸುವಾಗ ಎ.ಪಿ.ಎಂ.ಸಿ. ಮಾರುಕಟ್ಟೆ ದರಗಳನ್ನು ಪರಿಗಣಿಸಿ, ಎಂ.ಎಸ್.ಪಿ.ಟಿ.ಸಿ.ಗಳು ಪೂರಕ ಪೌಷ್ಠಿಕ ಆಹಾರವನ್ನು ಸಂಸ್ಕರಿಸುವ ದರ, ಪ್ಯಾಕಿಂಗ್ ವೆಚ್ಚ, ಸಾಗಾಣಿಕೆ ವೆಚ್ಚ, ಇತರೆ ವೆಚ್ಚಗಳನ್ನು ಪರಿಗಣಿಸಿ, ಅಂತಿಮವಾಗಿ ಬೆಲೆ ನಿಗದಿಪಡಿಸಲಾಗುತ್ತದೆ. ಆದ್ದರಿಂದ ಎ.ಪಿ.ಎಂ.ಸಿ. ಮಾರುಕಟ್ಟೆ ದರಕ್ಕೂ ಎಂ.ಎಸ್.ಪಿ.ಟಿ.ಸಿ. ಗೆ ಪಾವತಿಸುವ ದರಕ್ಕೂ ವ್ಯತ್ಯಾಸವಿರುತ್ತದೆ. |
| ಉ | ಬಂದಿದ್ದಲ್ಲಿ, ಮಾರುಕಟ್ಟೆ ಬೆಲೆಗಿಂತ ಕಡಿಮೆ ದರದಲ್ಲಿ ಕಳಪೆ ಆಹಾರ ಸಾಮಗ್ರಿಗಳನ್ನು ಖರೀದಿಸಿ ಪೂರೈಸುತ್ತಿರುವುದರ ಬಗ್ಗೆ ಸಂಬಂಧಿಸಿದ ತಾಲ್ಲೂಕು ಅಧಿಕಾರಿ ಸರ್ಕಾರದ ಗಮನಕ್ಕೆ ತರದೇ ಇರುವುದರಿಂದ ಅವರ ಮೇಲೆ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಕಳಪೆ ಗುಣಮಟ್ಟದ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲವಾದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ : ಮಮಇ 68 ಐಸಿಡಿ 2020

**ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 909 ಕ್ಕೆ ಅನುಬಂಧ**

**ಕಾರವಾರ / ಉತ್ತರ ಕನ್ನಡ ಜಿಲ್ಲೆಯಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಠಿಕ ಆಹಾರ ಪೂರೈಸುತ್ತಿರುವ ಎಂ.ಎಸ್.ಪಿ.ಟಿ.ಸಿ.ಗಳ ವಿವರ**

| ಕ್ರ. ಸಂ. | ತಾಲ್ಲೂಕಿನ ಹೆಸರು | ಕಾರವಾರ ಜಿಲ್ಲೆಯಲ್ಲಿರುವ ಅಂಗನವಾಡಿಗಳಿಗೆ ಆಹಾರವನ್ನು ಪೂರೈಸುತ್ತಿರುವ ಎಂ.ಎಸ್.ಪಿ.ಟಿ.ಸಿ.ಗಳ ಹೆಸರು |
|---|---|---|
| 1 | ಕಾರವಾರ | ಎಂ.ಎಸ್.ಪಿ.ಟಿ.ಸಿ. ಕಾರವಾರ |
| 2 | ಅಂಕೋಲಾ | ಎಂ.ಎಸ್.ಪಿ.ಟಿ.ಸಿ. ಕುಮಟಾ |
| 3 | ಕುಮಟಾ | ಎಂ.ಎಸ್.ಪಿ.ಟಿ.ಸಿ. ಕುಮಟಾ |
| 4 | ಹೊನ್ನಾವರ | ಎಂ.ಎಸ್.ಪಿ.ಟಿ.ಸಿ. ಹೊನ್ನಾವರ |
| 5 | ಭಟ್ಕಳ | ಎಂ.ಎಸ್.ಪಿ.ಟಿ.ಸಿ. ಹೊನ್ನಾವರ |
| 6 | ಶಿರಸಿ | ಎಂ.ಎಸ್.ಪಿ.ಟಿ.ಸಿ. ಶಿರಸಿ |
| 7 | ಸಿದ್ದಾಪುರ | ಎಂ.ಎಸ್.ಪಿ.ಟಿ.ಸಿ. ಶಿರಸಿ |
| 8 | ಯಲ್ಲಾಪುರ | ಎಂ.ಎಸ್.ಪಿ.ಟಿ.ಸಿ. ಕಾರವಾರ |
| 9 | ಮುಂಡಗೋಡ | ಎಂ.ಎಸ್.ಪಿ.ಟಿ.ಸಿ. ಕಾರವಾರ |
| 10 | ಹಳಿಯಾಳ | ಎಂ.ಎಸ್.ಪಿ.ಟಿ.ಸಿ. ಶಿರಸಿ |
| 11 | ಜೋಯಿಡಾ | ಎಂ.ಎಸ್.ಪಿ.ಟಿ.ಸಿ. ಕಾರವಾರ |